**ಭಾರತದಲ್ಲಿ ವಸಾಹತುಶಾಹಿ ಆಡಳಿತದಿಂದ ಹೊಸ ಸಾಂಸ್ಕೃತಿಕ ಪರಂಪರೆಯ ಉದಯ : ಡಾ ರು.ಮ.ಷಡಕ್ಷರಯ್ಯ**

ಹುನಗುಂದ: ಭಾರತದಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತ ಹೊಸ ಸಾಂಸ್ಕೃತಿಕ ಪರಂಪರೆಯ ಉದಯವಾಗಲು ಕಾರಣವಾಯಿತು. ಬ್ರಿಟಿಷರು ಭಾರತಕ್ಕೆ ಆಗಮಿಸಿ ವಸಾಹತುಶಾಹಿ ಆಡಳಿತ ಪ್ರಾರಂಭಿಸಿದ್ದರಿಂದ ನಮ್ಮ ದೇಶದಲ್ಲಿ ಅನೇಕ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಬದಲಾವಣೆಗಳು ತೀವ್ರಗತಿಯಲ್ಲಿ ಘಟಿಸಿದವು ಎಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕ ಡಾರು.ಮ.ಷಡಕ್ಷರಯ್ಯ ಅವರು ಹೇಳಿದರು.

ಪಟ್ಟಣದ ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದ ಇತಿಹಾಸ ಮತ್ತು ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆ ಬೆಂಗಳೂರು, ಪ್ರಾದೇಶಿಕ ಕಛೇರಿ ಧಾರವಾಡದ ಸಂಯುಕ್ತ ಆಶ್ರಯದಲ್ಲಿ ಜರುಗಿದ "ವಸಾಹತುಶಾಹಿ ಆಡಳಿತದಲ್ಲಿ ಭಾರತ" ಎಂಬ ವಿಷಯದ ಕುರಿತು ಏರ್ಪಡಿಸಿದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತ ಈ ವಿಚಾರ ಸಂಕಿರಣದಿಂದ ಅನೇಕ ಮೌಖಿಕ ವಿಚಾರಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ವಸಾಹತುಶಾಹಿ ಆಡಳಿತವು ಅನೇಕ ನಕಾರಾತ್ಮಕ ಅಂಶಗಳನ್ನು ಹೊಂದಿದ್ದರೂ ಸಮಾಜದಲ್ಲಿ ಬಾಲ್ಯವಿವಾಹ, ಸತಿಸಹಗಮನದಂತಹ ದುಷ್ಟ ಸಂಪ್ರದಾಯಗಳನ್ನು ರದ್ದುಗೊಳಿಸುವಲ್ಲಿ ಅವರು ಕೈಗೊಂಡಿರುವ ಕಾಯ್ದೆಗಳು ಸ್ಮರಣೀಯ ಈ ಮೂಲಕ ಹಲವಾರು ಸುಧಾರಣಾತ್ಮಕ ಬದಲಾವಣೆಗಳು ಘಟಿಸಿದವು ಎಂದರು.

ಕಾರ್ಯಕ್ರಮ ಆರಂಭದ ಮೊದಲು ಖ್ಯಾತ ಇತಿಹಾಸ ಸಂಶೋಧಕರಾದ ಡಾ.ಎಸ್.ಶೆಟ್ಟರ ಅವರ ನಿಧನದ ಪ್ರಯುಕ್ತ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಈರಣ್ಣ ಕೆ. ಪತ್ತಾರ ಸಮಾರಂಭದಲ್ಲಿ ಆಶಯನುಡಿಗಳಾನ್ನಾಡುತ್ತ ವಸಾಹತುಶಾಹಿ ಎಂದರೇನು? ವಸಾಹತುಶಾಹಿಗಳು ಭಾರತಕ್ಕೆ ಬರುವ ಮೂಲಕ ರಾಜಕೀಯವಾಗಿ ಹೇಗೆ ಬೆಳೆದರು ಎಂದು ತಿಳಿಸುತ್ತಾ ವಸಾಹತುಶಾಹಿಗಳಾದ ಬ್ರಿಟಿಷರು ಸಾಮಾಜಿಕವಾಗಿ, ರಾಜಕೀಯವಾಗಿ ಭಾರತದ ಮೇಲೆ ಪ್ರಭಾವ ಬೀರುವುದರೊಂದಿಗೆ ಭಾರತದ ಸಂಪತ್ತನ್ನು ಇಂಗ್ಲಂಡಿಗೆ ರವಾನಿಸುವುದರ ಮೂಲಕ ಭಾರತದ ಗುಡಿಕೈಗಾರಿಕೆಗಳು ಬಂದಾಗಿ ಕಾರ್ಮಿಕರು ಬೀದಿಗೆ ಬಂದರೆ, ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಲು ಕಾರಣರಾದರೂ ಸಹ ಅವರ ದಬ್ಬಾಳಿಕೆಯ ಕಾನೂನುಗಳಿಂದ ರೊಚ್ಚಿಗೆದ್ದ ಭಾರತೀಯರು ದೇಶವ್ಯಾಪಿ ಹೋರಾಟಕ್ಕಿಳಿದು 1947 ರ ಅಗಷ್ಟ 15 ರಂದು ಅವರನ್ನು ದೇಶದಿಂದ ಓಡಿಸುವ ಮೂಲಕ ಭಾರತೀಯರನ್ನು ಗುಲಾಮಗಿರಿಯಿಂದ ಮುಕ್ತವಾಗಿಸಿದರು ಎಂದು ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಶಿಲಾಧರ ಮುಗಳಿ 2019 ರ ವಿಚಾರ ಸಂಕಿರಣದ ಗ್ರಂಥವನ್ನು ಬಿಡುಗಡೆಗೊಳಿಸಿ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದರೆ ಸಾಲದು ಉತ್ತಮ ಸಂಶೋಧನಾ ಪ್ರಬಂಧಗಳಿಂದ ಕೂಡಿದ ಗ್ರಂಥಗಳು ಹೊರಬಂದರೆ ಮುಂದಿನ ಸಂಶೋಧನಾರ್ಥಿಗಳ ಸಂಶೋಧನೆಗೆ ಆಕರಗಳಾಗಬಹುದು ಎಂದರು.

ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ವಿಜಯಪುರದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರಾದ ಡಾ.ಕೆ.ಎಲ್.ಎನ್.ಮೂರ್ತಿ ಅವರು ಮಾತನಾಡುತ್ತಾ ವಸಾಹತುಶಾಹಿಗಳ ಕ್ರೈಸ್ತ ಮಿಷನರಿಗಳು ಭಾರತಕ್ಕೆ ಬಂದು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಆಧುನಿಕ ಶಿಕ್ಷಣದ ಬೆಳವಣಿಗೆಯಾಗಲು ಪ್ರೇರಣೆಯಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಿ.ಮ.ವಿ.ವ ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ.ಬಿ.ಎಂ.ಹೊಕ್ರಾಣಿಯವರು ವಹಿಸಿಕೊಂಡಿದ್ದರು, ಪ್ರಾಚಾರ್ಯರಾದ ಶಶಿಕಲಾ ಮಠ ಸ್ವಾಗತಿಸಿ ಮಹಾವಿದ್ಯಾಲಯದ ಬೆಳವಣಿಗೆಯ ಕುರಿತು ಪರಿಚಯಿಸಿದರು. ಪ್ರೊ.ಶ್ರೀಮತಿ ಎಸ್.ಬಿ.ಅಮಲಿಕೊಪ್ಪ ಅತಿಥಿಗಳನ್ನು ಪರಿಚಯಿಸಿದರು. ಪ್ರೊ.ಎಸ್.ಆರ್.ನಾಗಣ್ಣವರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರೊ.ಎಸ್.ಬಿ.ಚಳಗೇರಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕುಮಾರಿ ದರ್ಶಿನಿ ಆಲದಿ ಸಂಗಡಿಗರು ಪ್ರಾರ್ಥಿಸಿದರು. ವಿಚಾರ ಸಂಕಿರಣದಲ್ಲಿ ಡಾ. ಶಿಲಾಧರ ಮುಗಳಿ, ಡಾ.ರಮೇಶ ನಾಯಕ, ಡಾ.ಎಲ್.ಪಿ.ಮಾರುತಿ, ಡಾ.ಸಂಗಮೇಶ ಕಲ್ಯಾಣಿಯವರು ವಿವಿಧ ಗೋಷ್ಠಿಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಒಟ್ಟು 50ಕ್ಕೂ ಅಧಿಕ ಸಂಶೋಧನಾ ಪ್ರಬಂಧಗಳು ಮಂಡಿಸಲ್ಪಟ್ಟವು. ಡಾ.ಎಸ್.ಆರ್.ಗೋಲಗೊಂಡ ವಂದಿಸಿದರು. ಕುಮಾರಿ ಪವಿತ್ರಾ ದರಗಾದ ನಿರೂಪಿಸಿದರು.

Coordinator
IQAC
Vijaya Mahantesh Krupapohit S.R.Vastrad Arts,Science & Vijay Shankarappa Bellihal Commerce College, Hungund-587118
Dist:Bagalkote State:Karnataka


PRINCIPAL
Vijaya Mahantesh Krupaposhit S.R.Vastrad Arts, Science And Vijay Shankarappa Bellihal Commerce College
Hungund-587118 (Dist:Bagalkot-Karnataka)

V.M.K.S.R Vastrad Art, Sci & V.S. Bellihal Commerce College ★ Hungund

DATE OF NATIONAL SEMINAR - 29-02-2020
DATE OF PUBLICATION IN NEWS PAPER - 03-03-2020 - SAMAJIK KRANTI

V.S. Bellihal Commerce College ★ V.M.K.S.R. Vastrad Arts Science and ... Hungund

# ಭಾರತದಲ್ಲಿ ವಸಾಹತುಶಾಹಿ ಆಡಳಿತದಿಂದ ಹೊಸ ಸಾಂಸ್ಕೃತಿಕ ಪರಂಪರೆಯ ಉದಯ: ಡಾ ರು.ಮ.ಷಡಕ್ಷರಯ್ಯ



ಹುನಗುಂದ: ಭಾರತದಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತ ಹೊಸ ಸಾಂಸ್ಕೃತಿಕ ಪರಂಪರೆಯ ಉದಯವಾಗಲು ಕಾರಣವಾಯಿತು. ಬ್ರಿಟಿಷರು ಭಾರತಕ್ಕೆ ಆಗಮಿಸಿ ವಸಾಹತುಶಾಹಿ ಆಡಳಿತ ಪ್ರಾರಂಭಿಸಿದ್ದರಿಂದ ನಮ್ಮ ದೇಶದಲ್ಲಿ ಅನೇಕ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಬದಲಾವಣೆಗಳು ತೀವ್ರಗತಿಯಲ್ಲಿ ಘಟಿಸಿದವು ಎಂದು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಸಂಶೋಧನಾ ಸಂಸ್ಥೆಯ ವಿಶ್ರಾಂತ ಪ್ರಾಧ್ಯಾಪಕ ಡಾರು.ಮ.ಷಡಕ್ಷರಯ್ಯ ಅವರು ಹೇಳಿದರು.

ಪಟ್ಟಣದ ಎಸ್.ಆರ್.ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದ ಇತಿಹಾಸ ಮತ್ತು ಕರ್ನಾಟಕ ಸರ್ಕಾರದ ಪತ್ರಾಗಾರ ಇಲಾಖೆ ಬೆಂಗಳೂರು, ಪ್ರಾದೇಶಿಕ ಕಛೇರಿ ಧಾರವಾಡದ ಸಂಯುಕ್ತ ಆಶ್ರಯದಲ್ಲಿ ಜರುಗಿದ □ವಸಾಹತುಶಾಹಿ ಆಡಳಿತದಲ್ಲಿ ಭಾರತ□ ಎಂಬ ವಿಷಯದ ಕುರಿತು ಏರ್ಪಡಿಸಿದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತ ಈ ವಿಚಾರ ಸಂಕಿರಣದಿಂದ ಅನೇಕ ಮೌಖಿಕ ವಿಚಾರಗಳನ್ನು ತಿಳಿದುಕೊಳ್ಳಲು ಸಹಾಯಕವಾಗುತ್ತದೆ. ವಸಾಹತುಶಾಹಿ ಆಡಳಿತವು ಅನೇಕ ನಕಾರಾತ್ಮಕ ಅಂಶಗಳನ್ನು ಹೊಂದಿದ್ದರೂ ಸಮಾಜದಲ್ಲಿ ಬಾಲ್ಯವಿವಾಹ, ಸತಿಸಹಗಮನದಂತಹ ದುಷ್ಟ ಸಂಪ್ರದಾಯಗಳನ್ನು ರದ್ದುಗೊಳಿಸುವಲ್ಲಿ ಅವರು ಕೈಗೊಂಡಿರುವ ಕಾರ್ಯ್ದಗಳು ಸ್ಮರಣೀಯ ಈ ಮೂಲಕ ಹಲವಾರು ಸುಧಾರಣಾತ್ಮಕ ಬದಲಾವಣೆಗಳು ಘಟಿಸಿದವು ಎಂದರು.

ಕಾರ್ಯಕ್ರಮ ಆರಂಭದ ಮೊದಲು ಖ್ಯಾತ ಇತಿಹಾಸ ಸಂಶೋಧಕರಾದ ಡಾ.ಎಸ್.ಶೆಟ್ಟರ ಅವರ ನಿಧನದ ಪ್ರಯುಕ್ತ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಡಾ. ಈರಣ್ಣ ಕೆ. ಪತ್ತಾರ ಸಮಾರಂಭದಲ್ಲಿ ಆಶಯನುಡಿಗಳಾನ್ನಾಡುತ್ತ ವಸಾಹತುಶಾಹಿ ಎಂದರೇನು? ವಸಾಹತುಶಾಹಿಗಳು ಭಾರತಕ್ಕೆ ಬರುವ ಮೂಲಕ ರಾಜಕೀಯವಾಗಿ ಹೇಗೆ ಬೆಳೆದರು ಎಂದು ತಿಳಿಸುತ್ತಾ ವಸಾಹತುಶಾಹಿಗಳಾದ ಬ್ರಿಟಿಷರು ಸಾಮಾಜಿಕವಾಗಿ, ರಾಜಕೀಯವಾಗಿ ಭಾರತದ ಮೇಲೆ ಪ್ರಭಾವ ಬೀರುವುದರೊಂದಿಗೆ ಭಾರತದ ಸಂಪತ್ತನ್ನು ಇಂಗ್ಲಂಡಿಗೆ ರವಾನಿಸುವುದರ ಮೂಲಕ ಭಾರತದ ಗುಡಿಕೈಗಾರಿಕೆಗಳು ಬಂದಾಗಿ ಕಾರ್ಮಿಕರು ಬೀದಿಗೆ ಬಂದರೆ, ಶೈಕ್ಷಣಿಕವಾಗಿ ಪ್ರಗತಿಯನ್ನು ಸಾಧಿಸಲು ಕಾರಣರಾದರೂ ಸಹ ಅವರ ದಬ್ಬಾಳಿಕೆಯ ಕಾನೂನುಗಳಿಂದ ರೊಚ್ಚಿಗೆದ್ದ ಭಾರತೀಯರು ದೇಶವ್ಯಾಪಿ ಹೋರಾಟಕ್ಕಿಳಿದು ೧೯೪೭ ರ ಅಗಷ್ಟ ೧೫ ರಂದು ಅವರನ್ನು ದೇಶದಿಂದ ಓಡಿಸುವ ಮೂಲಕ ಭಾರತೀಯರನ್ನು ಗುಲಾಮಗಿರಿಯಿಂದ ಮುಕ್ತವಾಗಿಸಿದರು ಎಂದು ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ.ಶಿಲಾಧರ ಮುಗಳಿ ೨೦೧೯ ರ ವಿಚಾರ ಸಂಕಿರಣದ ಗ್ರಂಥವನ್ನು ಬಿಡುಗಡೆಗೊಳಿಸಿ ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದರೆ ಸಾಲದು ಉತ್ತಮ ಸಂಶೋಧನಾ ಪ್ರಬಂಧಗಳಿಂದ ಕೂಡಿದ ಗ್ರಂಥಗಳು ಹೊರಬಂದರೆ ಮುಂದಿನ ಸಂಶೋಧನಾರ್ಥಿಗಳ ಸಂಶೋಧನೆಗೆ ಆಕರಗಳಾಗಬಹುದು ಎಂದರು. ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯದ ವಿಜಯಪುರದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥರಾದ ಡಾ.ಕೆ.ಎಲ್.ಎನ್.ಮೂರ್ತಿ ಅವರು ಮಾತನಾಡುತ್ತಾ ವಸಾಹತುಶಾಹಿಗಳ ಕ್ರೈಸ್ತ ಮಿಷನರಿಗಳು ಭಾರತಕ್ಕೆ ಬಂದು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಆಧುನಿಕ ಶಿಕ್ಷಣದ ಬೆಳವಣಿಗೆಯಾಗಲು ಪ್ರೇರಣೆಯಾಗಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ವಿ.ಮ.ವಿ.ವ ಸಂಘದ ಗೌರವ ಕಾರ್ಯದರ್ಶಿಗಳಾದ ಶ್ರೀ.ಬಿ.ಎಂ.ಹೊಕ್ರಾಣಿಯವರು ವಹಿಸಿಕೊಂಡಿದ್ದರು, ಪ್ರಾಚಾರ್ಯರಾದ ಶಶಿಕಲಾ ಮಠ ಸ್ವಾಗತಿಸಿ ಮಹಾವಿದ್ಯಾಲಯದ ಬೆಳವಣಿಗೆಯ ಕುರಿತು ಪರಿಚಯಿಸಿದರು. ಪ್ರೊ.ಶ್ರೀಮತಿ ಎಸ್.ಬಿ.ಅಮಲಿಕೊಪ್ಪ ಅತಿಥಿಗಳನ್ನು ಪರಿಚಯಿಸಿದರು. ಪ್ರೊ.ಎಸ್.ಆರ್.ನಾಗಣ್ಣವರ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಪ್ರೊ.ಎಸ್.ಬಿ.ಚಳಗೇರಿ ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕುಮಾರಿ [illegible] ಸಂಗಡಿಗರು ಪ್ರಾರ್ಥಿಸಿದರು.

ವಿಚಾರ ಸಂಕಿರಣದಲ್ಲಿ ಡಾ.ಶಿಲಾಧರ ಮುಗಳಿ, ಡಾ.ರಮೇಶ ನಾಯಕ, ಡಾ.[illegible], ಡಾ.ಸಂಗಮೇಶ ಕಲ್ಯಾಣಿಯವರು ವಿವಿಧ ಗೋಷ್ಠಿಗಳ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದರು. ಒಟ್ಟು ೫೦ಕ್ಕೂ ಅಧಿಕ ಸಂಶೋಧನಾ ಪ್ರಬಂಧಗಳು ಮಂಡಿಸಲ್ಪಟ್ಟವು.

Principal
Vijaya Mahantesh Kripaprohit S.R.Vastrad
Arts,Science & Vijay Shankarappa Bellihal
Commerce College, Hungund-587118
Dist:Bagalkote State:Karnataka

DATE OF NATIONAL SEMINAR – 29-02-2020
DATE OF PUBLICATION – 16-03-2020
NEWS PAPER – VIJAYAVANI

V.M.K.S.R Vastrad Art, Science And V.S.Bellihal Commerce College ★ Hungund

ಡಾ.ರು.ಮ. ಷಡಕ್ಷರಯ್ಯ ಅಭಿಪ್ರಾಯ | ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ

# ವಸಾಹತುಶಾಹಿ ಆಡಳಿತದಿಂದ ತೀವ್ರ ಬದಲಾವಣೆ

■ ವಿಜಯವಾಣಿ ಸುದ್ದಿಜಾಲ ಹುನಗುಂದ

ಭಾರತದಲ್ಲಿ ಬ್ರಿಟಿಷರ ವಸಾಹತುಶಾಹಿ ಆಡಳಿತ ಹೊಸ ಸಾಂಸ್ಕೃತಿಕ ಪರಂಪರೆ ಉದಯವಾಗಲು ಕಾರಣವಾಯಿತು. ಬ್ರಿಟಿಷರು ಭಾರತಕ್ಕೆ ಆಗಮಿಸಿ ವಸಾಹತುಶಾಹಿ ಆಡಳಿತ ಪ್ರಾರಂಭಿಸಿದ್ದರಿಂದ ನಮ್ಮ ದೇಶದಲ್ಲಿ ಅನೇಕ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಬದಲಾವಣೆಗಳು ತೀವ್ರಗತಿಯಲ್ಲಿ ಘಟಿಸಿದವು ಎಂದು ವಿಶ್ರಾಂತ ಪ್ರಾಧ್ಯಾಪಕ ಡಾ.ರು.ಮ. ಷಡಕ್ಷರಯ್ಯ ಹೇಳಿದರು.

» **ಉತ್ತಮ ಸಂಶೋಧನಾ ಪ್ರಬಂಧ ಮಂಡಿಸಲು ಸಲಹೆ**

ಪಟ್ಟಣದ ವಿಎಸ್ಆರ್ ವಸ್ತ್ರದ ಕಲಾ, ವಿಜ್ಞಾನ ಹಾಗೂ ವಿ.ಎಸ್.ಬೆಳ್ಳಿಹಾಳ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಸೋಮವಾರ ಹಮ್ಮಿಕೊಂಡಿದ್ದ 'ವಸಾಹತುಶಾಹಿ ಆಡಳಿತದಲ್ಲಿ ಭಾರತ' ವಿಷಯದ ಕುರಿತು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು. ವಸಾಹತುಶಾಹಿ ಆಡಳಿತ ಅನೇಕ ನಕಾರಾತ್ಮಕ ಅಂಶ ಗಳನ್ನು ಹೊಂದಿದ್ದರೂ ಸಮಾಜದಲ್ಲಿ ಬಾಲ್ಯವಿವಾಹ, ಸತಿ ಸಹಗಮನದಂತಹ ಅನಿಷ್ಟ ಸಂಪ್ರದಾಯಗಳನ್ನು ರದ್ದುಗೊಳಿಸುವಲ್ಲಿ ಕೈಗೊಂಡಿರುವ ಕಾಯ್ದೆಗಳು ಸ್ಮರಣೀಯ. ಈ ಮೂಲಕ ಹಲವಾರು ಸುಧಾರಣಾತ್ಮಕ ಬದಲಾವಣೆಗಳು ಘಟಿಸಿದವು ಎಂದರು.



ವಿಜಯವಾಣಿ ಚಿತ್ರ

ಹುನಗುಂದದ ಎಸ್.ಆರ್.ವಸ್ತ್ರದ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣವನ್ನು ವಿಶ್ರಾಂತ ಪ್ರಾಧ್ಯಾಪಕ ಡಾ.ರು.ಮ. ಷಡಕ್ಷರಯ್ಯ ಉದ್ಘಾಟಿಸಿದರು. ಪ್ರಾಚಾರ್ಯೆ ಶಶಿಕಲಾ ಮಠ, ಪ್ರೊ.ಎಸ್.ಆರ್. ನಾಗಣ್ಣವರ, ಎಸ್.ಬಿ. ಚಳಗೇರಿ ಇದ್ದರು.

ಕವಿವಿ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಶಿಲಾಧರ ಮುಗಳಿ 2019ರ ವಿಚಾರ ಸಂಕಿರಣದ ಗ್ರಂಥವನ್ನು ಬಿಡುಗಡೆಗೊಳಿಸಿ ಮಾತನಾಡಿ, ವಿಚಾರ ಸಂಕಿರಣಗಳಲ್ಲಿ ಪ್ರಬಂಧಗಳನ್ನು ಮಂಡಿಸಿದರೆ ಸಾಲದು. ಉತ್ತಮ ಸಂಶೋಧನಾ ಪ್ರಬಂಧಗಳಿಂದ ಕೂಡಿದ ಗ್ರಂಥಗಳು ಹೊರಬಂದರೆ ಮುಂದಿನ ಸಂಶೋಧನಾರ್ಥಿಗಳ ಸಂಶೋಧನೆಗೆ ಆಕರಗಳಾಗಬಹುದು ಎಂದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ವಿಜಯಪುರದ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥ ಡಾ.ಕೆ.ಎಲ್.ಎನ್.ಮೂರ್ತಿ ಮಾತನಾಡಿ, ವಸಾಹತು ಶಾಹಿಗಳ ಕ್ರೈಸ್ತ ಮಿಷನರಿಗಳು ಭಾರತಕ್ಕೆ ಬಂದು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವುದರ ಮೂಲಕ ಆಧುನಿಕ ಶಿಕ್ಷಣದ ಬೆಳವಣಿಗೆಗೆ ಪ್ರೇರಣೆಯಾದವು ಎಂದರು.

ಕವಿವಿ ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕ ಡಾ.ಈರಣ್ಣ ಕೆ. ಪತ್ತಾರ ಮಾತನಾಡಿದರು. ವಿ.ಮ.ವಿ.ವ ಸಂಘದ ಗೌರವ ಕಾರ್ಯದರ್ಶಿ ಬಿ.ಎಂ. ಹೊಕ್ರಾಣಿ ಅಧ್ಯಕ್ಷತೆ ವಹಿಸಿದ್ದರು. ಪ್ರಾಚಾರ್ಯೆ ಶಶಿಕಲಾ ಮಠ ಸ್ವಾಗತಿಸಿದರು. ಪ್ರೊ.ಎಸ್.ಆರ್.ನಾಗಣ್ಣವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರೊ.ಎಸ್.ಬಿ. ಚಳಗೇರಿ, ಪ್ರೊ.ಎಸ್.ಬಿ. ಅಮಲಿಕೊಪ್ಪ, ಡಾ.ರಮೇಶ ನಾಯಕ, ಡಾ.ಎಲ್.ಪಿ. ಮಾರುತಿ, ಡಾ.ಸಂಗಮೇಶ ಕಲ್ಯಾಣಿ ಇದ್ದರು.

ಒಟ್ಟು 50ಕ್ಕೂ ಅಧಿಕ ಸಂಶೋಧನಾ ಪ್ರಬಂಧಗಳು ಮಂಡಿಸಲ್ಪಟ್ಟವು. ಕಾರ್ಯಕ್ರಮ ಆರಂಭಕ್ಕೂ ಮೊದಲು ಖ್ಯಾತ ಇತಿಹಾಸ ಸಂಶೋಧಕ ಡಾ.ಷ.ಶೆಟ್ಟರ್ ಅವರ ನಿಧನದ ಪ್ರಯುಕ್ತ ಶ್ರದ್ಧಾಂಜಲಿ ಸಲ್ಲಿಸಲಾಯಿತು.

Coordinator
IQAC
Vijaya Mahantesh Krupapohit S.R.Vastrad Arts,Science & Vijay Shankarappa Bellihal Commerce College, Hungund-587118
Dist:Bagalkote State:Karnataka

Principal
Vijaya Mahantesh Krupaposhit
S.R.Vastrad Arts, Science & V.S.Bellihal Commerce College,Hungund-587118